ಜನರ ಓಡಾಟ ನಡೆದ ಪೇಟೆ ಓಣಿಯಿಂದ ಮತ್ತೊಂದು ಓಣಿಗೆ ತಿರುಗಿದ ವ್ಯಾನು ಹಂಚು ಹೊದೆಸಿದ ದೊಡ್ಡ ಮನೆಯೆದುರು ನಿಂತಿತ್ತು. ಅಲ್ಲಿಯ ವಾತಾವರಣಕ್ಕೇ ಸಂಯಮ ಕಳೆದುಕೊಂಡ ಸುಗುಣಾ ಜೋರಾಗಿ ಅಳತೊಡಗಿದಳು. ಗಂಗಪ್ಪ ತೊರದನನ್ನು ಕೈಬಳಸಿ ಹಿಡಿದುಕೊಂಡು ಒಳಗೆ ಕರೆದೊಯ್ದ. ಜಗುಲಿಯಮೇಲೆ ಮಲಗಿಸಿದ ಶವ ಹೂಗಳಿಂದ ತುಂಬಿತ್ತು. ಗಂಧದಕಡ್ಡಿಯ ಪರಿಮಳ ಸೂತಕವನ್ನು ಹರಡುತ್ತಿತ್ತು. ಕೂತವರು ಗಾಂಭೀರ್ಯ ಹೊದ್ದುಕೊಂಡಿದ್ದರು. ಮೊಬೈಲುಗಳ ವಿಧವಿಧ ರಿಂಗ್‌ಟೋನುಗಳು ನಡುನಡುವೆ ವಿಷಯಾಂತರ ಮಾಡುತ್ತಿದ್ದವು. ಅಲ್ಲಲ್ಲಿ ನಿಂತವರು ಮುಂದಿನದನ್ನು ಚರ್ಚಿಸುತ್ತಲಿದ್ದರು. 'ಹೋಗು... ಹೂವು ಹಾಕಿ ನಮಸ್ಕಾರ ಮಾಡು...' ಅಂದ ಗಂಗಪ್ಪ.

ಯಾರೋ ಎಳೆದವರಂತೆ ಹೋದ ತೊರದ ಅದೆಲ್ಲ ಮುಗಿಸಿ ಎದ್ದಾಗ ಅಲ್ಲಿದ್ದವರೆಲ್ಲರ ಕಣ್ಣುಗಳು ತನ್ನತ್ತಲೇ ತಿರುಗುತ್ತಿರುವುದರ ಭಾಸವಾಗಿ ಮುಜುಗರಕ್ಕೊಳಗಾದ. ಯಾರೋ ಹಿರಿಯರು ಅವನನ್ನು ಕರೆದರು. '...ಇವನೂ ಅವನ ಮಗನೇ... ಕೈ ಜೋಡಿಸದಿದ್ರೆ ದೇವರು ಮೆಚ್ಚಲ್ಲ' ಅಂತ ಅಭಿಪ್ರಾಯ ಹೇಳಿದರು. 'ಅದು ಹೇಗೆ ಸರಿ? ದೈವವೇ ಬೇಡ ಅಂದಿದ್ದಕ್ಕೆ ಬೇರೆ ವಂಶಕ್ಕೆ ಕೊಟ್ಟಿದ್ದಲ್ವೆ? ಇನ್ನೆಲ್ಲಿ ಸಂಬಂಧ ಉಳೀತು?' ಎಂದು ಪ್ರಾಯದವ ಕೆಳದನಿಯೇ ಆದರೂ ಒರಟು ಸ್ವರದಲ್ಲಿ ಪ್ರತಿಭಟಿಸಿದ. 'ಹೌದು, ನಂದೂ ಅದೇ ಅಭಿಪ್ರಾಯ. ಈ ಕುಟುಂಬಕ್ಕೂ ಅವಗೂ ಈಗ ಯಾವ ಸಂಬಂಧವೂ ಉಳಿದಿಲ್ಲ. ಸಿದ್ಧರ ಅಪ್ಪಣೆಯೂ ಹಾಗೇ ಇತ್ತಂತೆ' ಎಂದು ಮತ್ತೊಬ್ಬ ಸಮರ್ಥಿಸಿದ.

ಹೆಣದ ಮಗ್ಗುಲಲ್ಲಿ ಕುಳಿತು, ತೊರದ ಬಂದಾಗಿಂದಲೂ ತನ್ನ ಅತ್ತು ಅತ್ತು ಕೆಂಪಾದ ಕಣ್ಣುಗಳನ್ನು ಅವನ ಮೇಲೇ ಕೀಲಿಸಿಕೊಂಡ ಮಧ್ಯವಯಸ್ಸು ದಾಟಿದವಳು ಇನ್ನು ತಾಳಲಾರದೆ '...ಏ ಶಿವಾ... ಸೋಮಾ, ಅದೇನು ಅಂತ ಹೇಳತಿದೀರ್‍ರೊ? ಈ ಸಂದರ್ಭದಲ್ಲೂ ನೀವು ತೀರಾ' ಎಂದು ದನಿಯೆತ್ತರಿಸಲಾಗದೆ ಸೋತು ಹಿಂದಕ್ಕೆ ಎರಡೂ ಕೈಯೂರಿ ಆತುಕೊಂಡಳು. ಸುಗುಣಾ ಧಾವಿಸಿ ಹೋಗಿ, 'ಅತ್ತಿಗೆ... ಆಯಾಸ ಮಾಡಕೋಬೇಡ, ಎಲ್ಲಾ ಸರಿ ಹೋಗತ್ತೆ' ಎಂದು ಬಳಸಿಕೊಂಡು ಕುಳಿತಳು.

'ಈ ಸಂದರ್ಭದಲ್ಲೇ ಅದು ಮುಖ್ಯವಾಗೋದು. ವಂಶದಿಂದ್ಲೇ ಕತ್ತರಿಸಿ ಕೊಡೋದು ಅಂದ್ರೇನು ಮತ್ತೆ? ಏನೋ ಮಾಡಹೋಗಿ ಮನೆತನವೇ ನಾಶವಾದೀತು ಆಮೇಲೆ!' ಹಿರಿಯವ ಘೋಷಿಸಿದ.

ವಾಗ್ವಾದ ನಡೆದು ಹಿರಿಯರೆಲ್ಲ ಸಮಾಧಾನಿಸಿ ಮುಂದಿನ ಕೆಲಸಕ್ಕೆ ಅವಸರಿಸಿದರು. ತೊರದ ಜೊತೆಯಲ್ಲೇ ಹೋದರೂ ಶವಕ್ಕೆ ಕೈ ಹಚ್ಚಲಾಗಲಿ, ಶಾಸ್ತ್ರಗಳಲ್ಲಿ ಭಾಗವಹಿಸಲಾಗಲಿ ಅವಕಾಶ ಕೊಡಲಿಲ್ಲ. ಇಲ್ಲಿ ಬಂದಾಗಿನಿಂದಲೂ ಒಂದು ಮಬ್ಬಿನಲ್ಲಿದ್ದಂತಿದ್ದ ಅವನಿಗೂ ಅದು ಬೇಕೆನಿಸಲಿಲ್ಲ. ಎಲ್ಲ ಮುಗಿಸಿದಾಗ ಕತ್ತಲು ಇಳಿಯತೊಡಗಿತ್ತು. ಗಂಗಪ್ಪ-ಸುಗುಣಾ ಹೋಗತೀವಿ ಅನ್ನುವಂತೆ ಸನ್ನೆ ಮಾಡಿ ಹೊರಟವರು ಹಿಂಬಾಲಿಸಿದ ತೊರದನಿಗೆ, 'ನೀನು ಅಲ್ಲೇ ಇರು' ಅಂದುದಕ್ಕೆ, 'ಅವನ ಅವಶ್ಯಕತೆ ಇಲ್ಲಿ...' ಅಂತ ಸೋಮ ಸುರುಮಾಡಿದ ಆಕ್ಷೇಪಣೆಯನ್ನು ತಡೆದ ಶಿವ, 'ಆಗಲಿ' ಅಂದ. ಮನೆಗೆ ತೀರ ಅಪರಿಚಿತನಾಗಿ ಇಂತಹ ಸಂದರ್ಭವೂ ಸೇರಿದ್ದಕ್ಕೆ ಏನೂ ತೋಚದ ತೊರದ ಜಗುಲಿ ಬೆಂಚಿನಮೇಲೆ ಒಬ್ಬಂಟಿಮೂಕನಾಗಿ ಕುಳಿತಿದ್ದ. ರಾತ್ರಿಯೂಟ ಮೌನದಲ್ಲೇ ಮುಗಿದು, 'ಮಾಳಿಗೆ ಮೇಲೆ ಹಾಸಿದೇನೆ, ನಿದ್ದೆ ಬಂದಿದ್ರೆ ಮಲಕ್ಕೋ' ಅಂದ ಶಿವನ ಮಾತಿಗೆ ತೊರದ ಮಾಳಿಗೆಗೆ ಹೋದ. ಮಲಗಲೆಂದು ಹಾಸಿಗೆಮೇಲೆ ಕೂಡುತ್ತಿರುವಾಗ ಶಿವ ಬಂದ. 'ಚಳಿಯಾದ್ರೆ ಇರಲಿ ಅಂತ ಕಂಬಳಿ ಇಟ್ಟಿದೀನಿ, ರಾತ್ರಿ ಕೆಳಗೆ ಹೋಗಬೇಕನಿಸಿದರೆ ಸ್ವಿಚ್ಚು ಇಲ್ಲಿದೆ, ಸಂಕೋಚ ಮಾಡಕೋಬೇಡ ಏನೇ ಬೇಕಿದ್ರೂ...' ಅಂದವ ನೆನಪಾದವನಂತೆ, 'ತೊರದಾ ಇಲ್ಲೊಂದು ಸಹಿ ಬೇಕಾಗಿತ್ತಲ್ಲೋ. ತೀರಿಕೊಂಡವರ ಸಮಾಧಾನಕ್ಕೆ... ಸಂಪ್ರದಾಯ ಅಷ್ಟೆ' ಎಂದು ಪ್ರೀತಿ ತುಂಬಿದ ದನಿಯಲ್ಲಿ ಕೇಳಿದ. ಖಾಲಿ ಸ್ಟ್ಯಾಂಪ್‌ಪೇಪರಿನ ಮೇಲೆ ತೊರದ ಸಹಿ ಮಾಡಿದ. ಆಗಷ್ಟೇ ಏದುಸಿರು ಬಿಡುತ್ತ ಮಾಳಿಗೆಯೇರಿ ಬಂದಿದ್ದ ಅದೇ ಮಹಿಳೆ ಅಷ್ಟರಲ್ಲಾಗಲೆ ಒಳಕೋಣೆಗೆ ಹೋದ ಶಿವನನ್ನು ಹಿಂಬಾಲಿಸಿದಳು. 'ಬೆಣ್ಣೆ ಹಚ್ಚಿದ್ಯಾ? ಈಗಲೂ ಹೇಳೋ ಸಂಬಂಧ ಇಲ್ಲಾ ಅಂತ!' - ನೋವು ಕಕ್ಕುವ ಸಿಟ್ಟಿನ ದನಿ. 'ಕಾನೂನಿಗೆ ಈ ಸಂಪ್ರದಾಯ ಶಾಸ್ತ್ರ ಗೊತ್ತಾಗಲ್ಲ. ಯಾವುದಕ್ಕೂ ಇರಲಿ ಅಂತ ಅಷ್ಟೇ...' - ಅಸಡ್ಡೆಯ ಉತ್ತರ. ಯಾರದ್ದೋ ಮನೆಯ ಟೀವಿ ಸೀರಿಯಲ್ಲಿಂದ ಬರುತ್ತಿರುವಂತಹ ವಾದವಿವಾದ